ಆ) ಹಾಗಿದ್ದಲ್ಲಿ, ಹೊಸ ಆಸ್ಪತ್ರೆಗಳ ಮಂಜೂರಾತಿಗೆ ಸರ್ಕಾರದ ಮುಂದಿರುವ ಯೋಜನೆಗಳಾವುವು ?

ಇ) ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯವರು ಅಧಿಕವಾಗಿರುವಲ್ಲಿ, ಆಸ್ಪತ್ರೆ ತೆರೆಯಲು ಪ್ರತ್ಯೇಕ ಯೋಜನೆ ಏನಾದರೂ ಇದೆಯೇ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಹೌದು.

ಆ) ಕನಿಷ್ಟ ಅವಶ್ಯಕತೆ ಕಾರ್ಯಕ್ರಮದಡಿಯಲ್ಲಿ ಬಯಲು ಪ್ರದೇಶದಲ್ಲಿ ೫೦೦೦೦ ಗ್ರಾಮಾಣ ಜನಸಂಖ್ಯೆ ಮತ್ತು ಗುಡ್ಡಗಾಡು ಮತ್ತು ಆದಿವಾಸಿ ಪ್ರದೇಶದಲ್ಲಿ ೨೦೦೦೦ ಜನ ಸಂಖ್ಯೆಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಹಾಗೂ ಒಂದು ಲಕ್ಷ ಜನಸಂಖ್ಯೆ ಅಥವಾ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಂದನ್ನು ೩೦ ಹಾಸಿಗೆಗಳ ಸೌಲಭ್ಯವುಳ್ಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಇ) ಹೌದು.

ಶ್ರೀ ಜಿ. ಎಸ್. ಆಚಾರ್.— ಮಾನ್ಯ ಅಧ್ಯಕ್ಷರೇ, ಈ ಪರಿಷ್ಕೃತ ಯೋಜನೆ ಬಯಲು ಪದೇಶಕ್ಕೆ ಸರಿ ಆಗಬಹುದು ಆದರೆ ಗುಡ್ಡ, ಬೆಟ್ಟ ಗುಡ್ಡ ಇರುವ ಮಲೆನಾಡು ಪ್ರದ್ರೇಶದಲ್ಲಿ ಈ ೩೦ ಸಾವಿರ ಹಾಗೂ ೨೦ ಸಾವಿರ ಜನಸಂಖ್ಯೆಯ ಮಿತಿ ಸಮಂಜಸವಾಗುವುದಿಲ್ಲ. ಆದ್ದರಿಂದ ಹಿಂದೆ ಇದ್ದಹಾಗೆ ಪ್ರಾಥಮಿಕ ಆರೋಗ್ಯ ಘಟಕ ಅಥವಾ ರೂರಲ್ ಆಸ್ಪತ್ರೆಗಳನ್ನು ತೆರೆಯುವಹಾಗೆ ಕ್ರಮ ಕೈಗೊಳ್ಳುವಿರಾ? ೨೦ ಸಾವಿರ ಜನಸಂಖ್ಯೆಗೆ ಸಮೂದಾಯ ಆರೋಗ್ಯ ಕೇಂದ್ರ ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ ? ೧೯೮೮–೮೯ ರಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರ, ಮತ್ತು ೩೦ ಹಾಸಿಗೆಗಳುಳ್ಳ ಸಮೂದಾಯ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಗುರಿ ಇದೆ?

ಶ್ರೀ ಬಿ. ರಾಚಯ್ಯ.—೧೯೮೮–೮೯ ರಲ್ಲಿ ಸುಮಾರು ೩೦೦ ಆರೋಗ್ಯ ಕೇಂದ್ರಗಳನ್ನು ತೆರೆಯುವ ಯೋಜನೆ ಇದೆ. ಮತ್ತೆ ಆದಿವಾಸಿಗಳು, ಗಿರಿಜನರು ಇರುವ ಕಡೆ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ೫೦ ಘಟಕಗಳನ್ನು ತೆಗೆಯುತಕ್ಕ ಯೋಜನೆ ಇದೆ.

ಪೋಲೀಸ್ ಇಲಾಖೆಯಲ್ಲಿರುವ ವಾಹನಗಳು

೧೬೩. ಶ್ರೀ ಶಿವಶೇಖರಪ್ಪ ಗೌಡ ಶಿರವಾಳ (ಶಹಾಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪೋಲೀಸ್ ಅಧಿಕಾರಿಗಳಿಗೆ ಒದಗಿಸಿರುವ ವಾಹನಗಳು ಅಂದರೆ ಜೀಪು ಮತ್ತು ಮೋಟಾರು ಸೈಕಲ್ಲುಗಳೆಷ್ಟು ?

ಆ) ಆ ಪೈಕಿ ಎಷ್ಟು ಜೀಪುಗಳು ಉಪಯೋಗದಲ್ಲಿವೆ ಮತ್ತು ಎಷ್ಟು ದುರಸ್ತಿಯಲ್ಲಿವೆ ?

ಇ) ಗುಲ್ಬರ್ಗಾ ಜಿಲ್ಲೆಯ ಪೋಲೀಸ್ ಅಧಿಕಾರಿಗಳಿಗೆ ೧೯೮೪–೮೫ನೇ ಸಾಲಿನಿಂದ ೧೯೮೭–೮೮ನೇ ಸಾಲಿನ ವರೆಗೆ ಹೊಸದಾಗಿ ಒದಗಿಸಿದ ಜೀಪು ಮತ್ತು ಮೋಟಾರ್ ಸೈಕಲ್‌ಗಳ ಸಂಖ್ಯೆ ಎಷ್ಟು ?

ಈ) ಈ ರೀತಿ ಒದಗಿಸಿದ ಜೀಪುಗಳು ಮತ್ತು ಮೋಟಾರು ಸೈಕಲ್‌ಗಳು ಯಾವ ಯಾವ ಕಾರ್ಖಾನೆಗಳಿಂದ ಖರೀದಿಸಲಾಗಿದೆ.

ಉ) ಯಾದವಗಿರಿ ಸಬ್ ಡಿವಿಜನ್‌ಗೆ ಎಷ್ಟು ಜೀಪು ಮತ್ತು ಮೋಟಾರ್ ಸೈಕಲ್‌ಗಳಿಷ್ಟನ್ನು ಒದಗಿಸಲಾಗಿದೆ. ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು). —

ಅ) ಪೋಲೀಸ್ ಇಲಾಖೆಗೆ ಒದಗಿಸಿದ ವಾಹನಗಳು.

ಜೀಪುಗಳು ೫೩೫ ಮೋಟಾರ್ ಸೈಕಲ್‌ಗಳು ೯೭೧

ಆ) ಉಪಯೋಗದಲ್ಲಿ ೪೫೪ ದುರಸ್ತಿಯಲ್ಲಿ ೮೧

ಇ)

ವರ್ಷ	ಜೀಪು	ಮೋಟಾರ್ ಸೈಕಲ್
೧೯೮೪–೮೫	೧	೪
೧೯೮೫–೮೬	೨	೧
೧೯೮೬–೮೭	—	೮
೧೯೮೭–೮೮	—	೩
ಒಟ್ಟು	೩	೧೬

ಈ) ೧) ಜೀಪು : ಮಹೇಂದ್ರ ಮತ್ತು ಮಹೇಂದ್ರ ಬೊಂಬಾಯಿ.

೨) ಮೋಟಾರ್ ಸೈಕಲ್ : ಎನ್‌ಫೀಲ್ಡ್ ಇಂಡಿಯಾ, ಮದ್ರಾಸ್.

ಉ) ನಾಲ್ಕು ಜೀಪು ಮತ್ತು ಎಂಟು ಮೋಟಾರ್ ಸೈಕಲ್‌ಗಳನ್ನು ಒದಗಿಸಲಾಗಿದೆ.

ಶ್ರೀ ಶಿವಶೇಖರಪ್ಪ ಗೌಡ ಶಿರವಾಳ.—ಅಧ್ಯಕ್ಷರೇ, ನಮ್ಮ ಯಾದವಗಿರಿ ಡಿವಿಜನ್‌ಗೆ ನಾಲ್ಕು ಜೀಪುಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದರಲ್ಲಿ ಡೀಸೆಲ್‌ನವು ಎಷ್ಟು ಪೆಟ್ರೋಲ್‌ನ ಎಷ್ಟು ಹಾಗೂ ಯಾವ ಮಾಡೆಲ್‌ನ ಗಾಡಿಗಳು ಎಂದು ಕೇಳಿದ್ದೆ. ಮತ್ತೆ '' ಇ '' ಪ್ರಶ್ನೆಗೆ ಉತ್ತರವಾಗಿ ೧೯೮೬–೮೭ ಹಾಗೂ ೧೯೮೭–೮೮ರಲ್ಲಿ ಜೀಪುಗಳನ್ನು ಕೊಟ್ಟಿಲ್ಲವೆಂದು ಹೇಳಿದ್ದೀರಿ. ಈಗ ನಮ್ಮಲ್ಲಿ ಇರತಕ್ಕ ಜೀಪುಗಳು ಬಹಳ ಹಳೆಯ ಜೀಪುಗಳಾಗಿವೆ. ನಮ್ಮಲ್ಲಿ ಮರ್ಡರ್ ಆದರೆ ದರೋಡೆ ಯಾದರೆ ಈ ವಾಹನಗಳನ್ನು ಉಪಯೋಗಿಸಿ ತ್ವರಿತ ಕಾರ್ಯಪ್ರವೃತ್ತರಾಗಲು ಸಾಧ್ಯವಿಲ್ಲ. ಇವುಗಳು ಎಷ್ಟು ಪೆಟ್ರೋಲ್ ಕುಡಿಯುತ್ತವೋ ಗೊತ್ತಾಗುವುದಿಲ್ಲ. ಈ ಗಾಡಿಗಳನ್ನು ದಬ್ಬಿದರೂ ಕೂಡಾ ಚಾಲೂ ಆಗುವುದಿಲ್ಲ. ಆದ್ದರಿಂದ ನಮ್ಮ ವಿಭಾಗಕ್ಕೆ ಆದಷ್ಟು ಜಾಗ್ರತೆ ಹೊಸ ಜೀಪುಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಡೆ.—ಹಳೆಯ ಉಪಯೋಗಕ್ಕೆ ಬಾರದಿರುವ ಜೀಪುಗಳನ್ನೆಲ್ಲಾ ತೆಗೆದುಹಾಕಿ ಹೊಸ ಜೀಪುಗಳನ್ನು ಕೊಡಬೇಕೆನ್ನುವುದು ನಮ್ಮ ಉದ್ದೇಶ. ಆದರೆ ಎಲ್ಲಾ ಕಡೆಗೆ ಒಟ್ಟಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಣಕಾಸಿನ ಅನುಕೂಲವನ್ನು ನೋಡಿ ಎಲ್ಲೆಲ್ಲಿ ಎಷ್ಟರವಂಟ್ಟಿಗೆ ಹೊಸ ಜೀಪುಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಅದನ್ನು ಕೊಡುತ್ತೇವೆ. ಈಗಾಗಲೇ ನಾವು ಅನೇಕ ಕಡೆ ಹೊಸ ಜೀಪುಗಳನ್ನು ಕೊಟ್ಟಿದ್ದೇವೆ. ಗುಲ್ಬರ್ಗಾ ಜಿಲ್ಲೆಗೆ ಹೊಸ ಜೀಪುಗಳನ್ನು ಆದಷ್ಟು ಬೇಗ ಕೊಡುತ್ತೇವೆ.

ಶ್ರೀ ಶಿವಶೇಖರಪ್ಪ ಗೌಡ ಶಿರವಾಳ.—ಬರತಕ್ಕ ಹೊಸ ಜೀಪುಗಳನ್ನೆಲ್ಲಾ ಬೆಂಗಳೂರು ಹಾಗೂ ಮುತ್ತಮುತ್ತಣ ತಾಣೆಗಳಿಗೆ ಕೊಡುತ್ತಾರೆ. ಗುಲ್ಬರ್ಗ ಹಾಗೂ ಯಾದಗಿರಿಗೆ ಹೊಸ ಜೀಪುಗಳು ಒಂದೂ ಬಂದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಯಾವ ಜಿಲ್ಲೆಯಲ್ಲಿ ಬಹಳ ಕೆಟ್ಟ ಪರಿಸ್ಥಿತಿಯಲ್ಲಿ ವಾಹನಗಳು ಇಲ್ಲಿವೆಯೋ ಅಂತಹವುಗಳನ್ನು ರೀಪ್ಲೇಸ್ ಮಾಡತಕ್ಕದ್ದು ಯೋಗ್ಯ. ಈಗ ಗುಲ್ಬರ್ಗ ಜಿಲ್ಲೆಯಲ್ಲಿ ರೀಪ್ಲೇಸ್ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಸವರಾಜ ಹಾವಗಪ್ಪ ಪಾಟೀಲ್.—ಕೆಲವು ಕಡೆ ಜೀಪು ಇಲ್ಲದೆ ಪೋಲೀಸ್ ಅಧಿಕಾರಿಗಳು ತಿರುಗಾಡಲಿಕ್ಕೂ ಕಷ್ಟವಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಎಲ್ಲಿ ಎಂದು ಹೇಳಲಿಲ್ಲ.

ಶ್ರೀ ಬಸವರಾಜ ಹಾವಗಪ್ಪ ಪಾಟೀಲ್.—ಹುಮನಾಬಾದ್‌ನಲ್ಲಿ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಹುಮಾನಾಬಾದ್‌ನಲ್ಲಿ ಇಲ್ಲ ಎಂದರೆ ತಕ್ಷಣ ಒಂದು ಹಳೆಯ ಜೀಪು ನ್ನಾದರೂ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೆ ನಿಮ್ಮ ಪ್ರಶ್ನೆಯನ್ನು (೪೬೬) ಅನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಏಡ್ಸ್ ರೋಗವನ್ನು ಪತ್ತೆ ಹಚ್ಚಲು ಕಾರ್ಯಕ್ರಮಗಳು

೧೧೯೬. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೌಂದತ್ತಿ ತಾಲ್ಲೂಕಿನಲ್ಲಿ ಏಡ್ಸ್ ರೋಗ ತಗಲಿರುವ ಮಹಿಳೆಯರಿಗೆ ವೈದ್ಯಕೀಯ ಸೌಲಭ್ಯ ಒದಗಿಸಲು ಕೈಗೊಂಡಿರುವ ಕ್ರಮವೇನು ?

ಆ) ರಾಜ್ಯದಲ್ಲಿ ಏಡ್ಸ್ ತಗುಲಿರುವ ರೋಗಿಗಳ ಸಂಖ್ಯೆ ಎಷ್ಟು ?

ಇ) ರಾಜ್ಯದಲ್ಲಿ ಏಡ್ಸ್ ರೋಗ ಪತ್ತೆ ಹಚ್ಚಲು ಹಾಕಿಕೊಂಡಿರುವ ಕಾರ್ಯ ಕ್ರಮವೇನು ?

ಈ) ರಾಜ್ಯದಿಂದ ಪರರಾಷ್ಟ್ರಕ್ಕೆ ಹೋಗಿ ಬಂದಿರುವ ವ್ಯಕ್ತಿಗಳ ರಕ್ತ ತಪಾಸಣೆಗಾಗಿ ತೆಗೆದು ಕೊಳ್ಳಲಾಗಿರುವ ಕಾರ್ಯಕ್ರಮವೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಸೌಂದತ್ತಿ ತಾಲ್ಲೂಕಿನಲ್ಲಿ ಏಡ್ಸ್ ಕಾಯಿಲೆಗೆ ತುತ್ತಾದ ಮಹಿಳೆಗೆ ಸ್ಥಳೀಯ ಸಾರ್ವಜನಿಕ ಆಸ್ಪತ್ರೆಯಲ್ಲಿ ನಂತರ ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ನಂತರ ಬೆಳಗಾವಿ ಯಲ್ಲಿರುವ ರಿಜೆಫಷನ್ ಕೇಂದ್ರಕ್ಕೆ ವರ್ಗಾಯಿಸಲಾಗಿದ್ದು. ಬೆಳಗಾವಿ ಜಿಲ್ಲಾ ಶಸ್ತ್ರ ಚಿಕಿತ್ಸಕರ ನೇತೃತ್ವದಲ್ಲಿ ತಜ್ಞ ವೈದ್ಯರುಗಳ ಒಂದು ತಂಡದಿಂದ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗು ತ್ತಿದೆ.

ಆ) ಒಂದು

ಈ ಕೆಳಕಂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

---

೧ ಏಡ್ಸ್ ರೋಗ ಪತ್ತೆ ಹಚ್ಚಲು ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯ ಮೈಕ್ರೊ ಬಾಯಾಲಜಿ ಇಲಾಖೆಯಲ್ಲಿ ಏಡ್ಸ್ ಸರ್ವಿಲೈನ್ಸ್ ಘಟಕ ಸ್ಥಾಪಿಸಲಾಗಿದೆ.

೨ ರಾಜ್ಯದ ವಿವಿಧ ವೈದ್ಯಕೀಯ ಸಂಸ್ಥೆಗಳಿಂದ ಆನುಮಾನವುಳ್ಳ ಪ್ರಕರಣಗಳ ರಕ್ತದ ಮಾದರಿ ಗಳನ್ನು ಪರೀಕ್ಷೆ ಮಾಡಲು ಏರ್ಪಾಡು ಮಾಡಲಾಗಿದೆ.

ಈ) ಏಡ್ಸ್ ಬಗ್ಗೆ ಭಾರತ ಸರ್ಕಾರವು ಕಾನೂನು ತಯಾರಿಸುತ್ತಿದ್ದು, ಅದರ ತೀರ್ಮಾನಕ್ಕಾಗಿ ಕಾಯಲಾಗುತ್ತಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸೌಂದತ್ತಿ ತಾಲ್ಲೂಕಿನಲ್ಲಿ ಏಡ್ಸ್ ರೋಗಕ್ಕೆ ಒಳಗಾಗಿರು ವಂತೆ ಒಬ್ಬ ಮಹಿಳೆಯನ್ನು ಗುರುತಿಸಲಾಗಿದೆ. ಇದರ ಹಿನ್ನೆಲೆ ಏನು ? ರಾಜ್ಯದಲ್ಲಿ ಇತರ ಬಗೆ ಏನಾದರೂ ಸಮೀಕ್ಷೆ ನಡೆದಿದೆಯೇ ? ಆ ಮಹಿಳೆಯನ್ನು ರಿಜೆಷ್ಟನ್ ಕೇಂದ್ರಕ್ಕೆ ವರ್ಗಾಯಿಸಿದ ಮೇಲೆ ಸುತ್ತಮುತ್ತಲೂ ಇರತಕ್ಕ ಜನ ಬೇರೆ ಕಡೆಗೆ ವರ್ಗಾಯಿಸಬೇಕೆಂದೂ ಒತ್ತಾಯ ಮಾಡಿರುವುದಲ್ಲದೆ, ಆಕೆಯು ಇಡೀ ಮನೆತನದ ಮೇಲೆ ಸಾರ್ವಜನಿಕ ಬಹಿಷ್ಕಾರ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಏಡ್ಸ್ ರೋಗವನ್ನು ಪತ್ತೆಹಚ್ಚಲಿಕ್ಕೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಒಂದು ಘಟಕ ವನ್ನು ಪ್ರಾರಂಭ ಮಾಡಲಾಗಿದೆಯೆಂದು ಹೇಳಿದ್ದೀರಿ. ಇಷ್ಟು ಭಯಂಕರ ರೋಗವಾಗಿದ್ದು ರಾಜ್ಯ ಮಟ್ಟದಲ್ಲಿ ಬೇರೆ ಕಡೆ ಇಂತಹ ಒಂದು ಘಟಕವನ್ನು ಪ್ರಾರಂಭ ಮಾಡಲು ಕ್ರಮ ತೆಗೆದುಕೊಳ್ಳುತ್ತೀರಾ ?